ಈ) ನಿಬಂಧನೆಗಳನ್ನು ಅನುಬಂಧ 'ಅ'ದಲ್ಲಿ ಕೊಟ್ಟಿದೆ.
ಈಗಿರುವ ನಿಬಂಧನೆಗಳಿಂದ ತಾಂತ್ರಿಕ ಶಾಲೆಗಳನ್ನು ತೆರೆಯುವುದು ಸಾಧ್ಯ.

ಉ) ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ಇರುವ ನಿಬಂಧನೆಗಳನ್ನು ಅನುಬಂಧ 'ಆ'ನಲ್ಲಿ ಕೊಟ್ಟಿದೆ.

ತಾಂತ್ರಿಕ ಶಾಲೆಗಳನ್ನು ತೆರೆಯಲು ಬಹಳ ಜನ ಖಾಸಗಿ ವಿದ್ಯಾ ಸಂಸ್ಥೆಗಳವರು ಮುಂದೆ ಬರುತ್ತಿರುವುದರಿಂದ ಶಾಲೆಗಳನ್ನು ನಿಜವಾಗಿ ನಡೆಸಲು ಆಸಕ್ತಿ ಇರುವವರು, ಆರ್ಥಿಕವಾಗಿ ಸುಭದ್ರವಾಗಿರುವವರು ಮತ್ತು ತಾಂತ್ರಿಕ ಶಾಲೆಗಳ ಗುಣಮಟ್ಟವನ್ನು ಕಾಯ್ದಿರಿಸಲು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಭದ್ರತಾ ನಿಧಿಯನ್ನು ಕಟ್ಟಬೇಕೆಂಬ ನಿಬಂಧನೆಯನ್ನು ತಾಂತ್ರಿಕ ಶಾಲೆಗಳ ವಿಷಯದಲ್ಲಿ ಹಾಕಿರುವುದು ಸಮಂಜಸವಾಗಿದೆ. ಸದ್ಯದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳನ್ನು ಬಿಟ್ಟರೆ ಉಳಿದವರೆಲ್ಲರೂ ಸರ್ಕಾರ ಹಾಕಿರುವ ನಿಬಂಧನೆಗಳನ್ನು ಪಾಲಿಸಿದ್ದಾರೆ.

ಅನುಬಂಧ–ಅ

ಈಗ ಹೊಸದಾಗಿ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಖಾಸಗಿ ಸಂಸ್ಥೆಯವರು ತೆರೆಯಲು ಮುಂದೆ ಬಂದಲ್ಲಿ ಅಂತಹವರು ನಿಗದಿತ ಅರ್ಜಿ ಫಾರಂನೊಂದಿಗೆ, ಒಂದು ಕೋರ್ಸಿಗೆ ರೂ. ೨೦೦ರಂತೆ ಸರ್ಕಾರಕ್ಕೆ ಜಮಾ ಮಾಡಬೇಕು ಮತ್ತು ಅರ್ಜಿಯೊಂದಿಗೆ ಕೆಲವು ಅರ್ಹತಾ ದಾಖಲು ಪತ್ರಗಳನ್ನು ಲಗತ್ತಿಸಬೇಕು. ನಂತರ ಈ ವಿಷಯದಲ್ಲಿ ಸ್ಥಳ ಪರಿಶೀಲನೆ ಮಾಡಲು ಪರಿಣಿತರ ಸಮಿತಿಯನ್ನು ನೇಮಿಸಲಾಗುವುದು. ಪರಿಣಿತರ ಸಮಿತಿಯ ವರದಿಯನ್ನು ಸರ್ಕಾರ ಒಪ್ಪಿದ ನಂತರ ಸರ್ಕಾರದ ಆದೇಶದಂತೆ ಕೋರ್ಸಿಗೆ ಮೊದಲನೆ ವರ್ಷಕ್ಕೆ ೧ ಲಕ್ಷ, ಎರಡನೇ ವರ್ಷಕ್ಕೆ ೨ ಲಕ್ಷ ಹಾಗೂ ಮೂರನೇ ವರ್ಷಕ್ಕೆ ೩ ಲಕ್ಷದಂತೆ ಭದ್ರತಾ ನಿಧಿ ಅಥವಾ ಷೆಡ್ಯೂಡ್ ಬ್ಯಾಂಕಿನಿಂದ ಪಡೆದ ಬ್ಯಾಂಕ್ ಗ್ಯಾರಂಟಿಯನ್ನು ಕೊಡಬೇಕಾಗುವುದು ಅಲ್ಲದೆ ಈ ಸಂಸ್ಥೆಯಲ್ಲಿ ಪಾಲಿಟೆಕ್ನಿಕ್‌ನ್ನು ನಡೆಸುವ ಸಲುವಾಗಿ ಸಾಕಷ್ಟು ಸಂಪನ್ಮೂಲವಿರಬೇಕು.

ಈ ಮೇಲ್ಕಂಡ ನಿಬಂಧನೆಗಳಿಗೆ ಬದ್ಧರಾಗುವಂತಹ ಖಾಸಗಿ ಸಂಸ್ಥೆಗಳು ಪಾಲಿಟೆಕ್ನಿಕ್‌ನ್ನು ತೆರೆಯಬಹುದು.

ಅನುಬಂಧ–ಆ

ಯಾವುದೇ ಖಾಸಗಿ ಸಂಸ್ಥೆಯು ಹೊಸದಾಗಿ ವೈದ್ಯಕೀಯ ಅಥವಾ ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭಿಸಬೇಕಾದರೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯಕ್ಕೆ ನಿಗದಿಪಡಿಸಿದ ಅವಧಿಯಲ್ಲಿ ಅರ್ಜಿ ಸಲ್ಲಿಸಬೇಕು ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಸಂಯೋಜನಾ ಶುಲ್ಕವನ್ನು ಕಟ್ಟಬೇಕು. ಈ ಶುಲ್ಕ ೨೦೦೦ ರೂ. ನಿಂದ ೧೦,೦೦೦ ರೂ.ವರೆಗೆ ಇದೆ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ಮೊತ್ತದ ಶುಲ್ಕ ಇದೆ. ವಿಶ್ವವಿದ್ಯಾನಿಲಯವು ನಿಯಮಿಸಿದ ಸಮಿತಿಯು ಪರಿಶೀಲನೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಸೂಕ್ತ ಶಿಫಾರಸ್ಸು ಮಾಡುತ್ತದೆ. ಸಮಿತಿಯ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಒಪ್ಪಿದ ನಂತರ ಪ್ರಸ್ತಾವನೆ ಸರ್ಕಾರಕ್ಕೆ ಬಂದು, ಸರ್ಕಾರವು ಕೋರಿಕೆಗಳನ್ನು ಪರಿಶೀಲಿಸುತ್ತದೆ, ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳ ವಿಷಯದಲ್ಲಿ ತಾಂತ್ರಿಕ ಶಾಲೆಗಳಿಗೆ ನಿಗದಿಪಡಿಸಿದಂತೆ ನಿಧಿ ಕಟ್ಟಬೇಕಾಗಿಲ್ಲ.

ಹೂವಿನ ಸಿಗ್ಲಿಯಲ್ಲಿ ಮೇಲ್ಕಟ್ಟಿದ ಕಂಡಿಯುವ ನೀರಿನ ತೊಟ್ಟಿ ಕಟ್ಟುವ ಬಗ್ಗೆ

೧೪೮೪. ಶ್ರೀ ನೀಲಕಂಠಗೌಡ ವಿ. ಪಾಟೀಲ್ (ಶಿಗ್ಗಾಂವ).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವಣೂರು ತಾಲ್ಲೂಕು ಹೂವಿನಸಿಗ್ಲಿ ಮೇಲ್ಮಟ್ಟದ ಕುಡಿಯುವ ನೀರಿನ ತೊಟ್ಟಿ ಕಟ್ಟುವ ಬಗ್ಗೆ ೫,೦೦೦ ರೂಗಳ ಕೇವಣಿಯಿಟ್ಟು ಈ ಯೋಜನೆಯು ಈ ಹಿಂದೆ ಮಂಜೂರು ಆದದ್ದು ಸರ್ಕಾರದವರ ಗಮನಕ್ಕೆ ಬಂದಿಯೇ ?

ಆ) ಹಾಗಿದ್ದಲ್ಲಿ ಈವರೆಗೂ ಕೆಲಸ ಪ್ರಾರಂಭ ಮಾಡುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣವೇನು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ಮಂತ್ರಿಗಳು).—

ಅ) ಬಂದಿದೆ.

ಆ) ಈ ಯೋಜನೆಯ ಕೆಲಸ ಪ್ರಾರಂಭಿಸಲಾಗಿದೆ. ಜಲಮೂಲ ಇತ್ಯರ್ಥವಾಗಿದೆ. ನೀರಿನ ತೊಟ್ಟಿ ಕಟ್ಟುವ ಕೆಲಸವನ್ನು ಗುತ್ತಿಗೆ ದಾರರಿಗೆ ಟೆಂಡರ್ ಮೇರೆಗೆ ವಹಿಸಲಾಗಿದೆ. ಆದರೆ ಈ ಗುತ್ತಿಗೆದಾರರು ಇದುವರೆವಿಗೂ ಕೆಲಸ ಪ್ರಾರಂಭಿಸಿರುವುದಿಲ್ಲ. ಆದುದರಿಂದ ಈ ಟೆಂಡರನ್ನು ವಜಾ ಮಾಡಿ ಮೇಲಿನ ಕೆಲಸವನ್ನು ಇಲಾಖೆ ವತಿಯಿಂದ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ಪುರಸಭೆಗಳನ್ನು ಮಂಡಲ ಪಂಚಾಯತಿಗಳನ್ನಾಗಿ ಪರಿವರ್ತಿಸುವ ಬಗ್ಗೆ,

೧೯೪೪. ಶ್ರೀಮತಿ ಸುಮ ವಸಂತ (ವಿರಾಜಪೇಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಪುರಸಭೆಗಳನ್ನು ಮಂಡಲ ಪಂಚಾಯ್ತಿಗಳನ್ನಾಗಿ ಪರಿವರ್ತಿಸಲಾಗಿದೆ, ಅವು ಯಾವುವು ?

ಆ) ಈ ರೀತಿ ಮಂಡಲ ಪಂಚಾಯ್ತಿಗಳಾಗಿ ಪರಿವರ್ತನೆಗೊಂಡು ಪುರಸಭೆಗಳ ನೌಕರರನ್ನು ಏನು ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ರಾಜ್ಯದಲ್ಲಿ ೭೧ ಪುರಸಭೆಗಳನ್ನು ಮಂಡಲ ಪಂಚಾಯ್ತಿಗಳಾಗಿ ಪರಿವರ್ತಿಸಲಾಗಿದೆ. ವಿವರಗಳನ್ನು ಲಗತ್ತಿಸಿದೆ.

ಆ) ಜಿಲ್ಲಾ ಪರಿಷತ್ ಕಾಯಿದೆಯಲ್ಲಿ ಪುರಸಭೆಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ವರ್ಗದವರೆಲ್ಲರೂ ಕಾಯಿದೆಯಡಿಯಲ್ಲಿ ಬೇರೆ ವ್ಯವಸ್ಥೆ ಮಾಡುವ ತನಕ ಪರಿವರ್ತಿಸಿದ ಮಂಡಲಗಳಲ್ಲಿ ಮುಂದುವರಿಯುವ ಅವಕಾಶವಿರುವುದು. ಇವರ ಸೇವೆಯನ್ನು ಮಂಡಲ ಪಂಚಾಯತಿಗಳಲ್ಲಿ ಮುಂದೆವರಿಸಲು ಸರ್ಕಾರದ ಪರಿಶೀಲನೆಯಲ್ಲಿದೆ,

RURAL DEVELOPMENT AND PANCHAYATRAJ SECRETARIAT
Notification No. RDP 237 VAC 85

Bangalore, dated 17th January 1986.

Whereas the draft of the Notification No. RDP 237 VAC 85 dated 20th December 1985 was published in Part IV-2 C (ii) of the Karnataka Gazette Extraodinary dated 20th December 1985 as required by sub-section (1) of section 128 of the Karnataka Zilla Parishads, Taluk Panchayat Samithis, Mandal Panchayats and Nyaya Panchayats Act, 1983 (Karnataka Act 20 of 1985) inviting objec-